ಕುರ್ಚಿಯೊಂದು ಇದ್ದಿತು. ಶಿಷ್ಯ ಗೋಡೆಯನ್ನು ಹಾರಿ ಹೊರಗೆ ಹೋಗಿರುವುದು ಗುರುಗಳಿಗೆ ಗೊತ್ತಾಯಿತು. ಅವರು ಆ ಕುರ್ಚಿಯನ್ನು ಅಲ್ಲಿಂದ ತೆಗೆದು, ಅದೇ ಜಾಗದಲ್ಲಿ ತಾವೇ ನಿಂತರು.

ಹೊರಗೆ ತಿರುಗಾಡಲು ಕಳ್ಳನಂತೆ ಹೋಗಿದ್ದ ಶಿಷ್ಯ ಈಗ ವಾಪಸ್ ಬಂದ. ಕುರ್ಚಿಯ ಜಾಗದಲ್ಲಿ ಗುರು ನಿಂತಿರುವುದು ಅವನಿಗೆ ತಿಳಿದಿರಲಿಲ್ಲ. ಮೆಲ್ಲಗೆ ಗೋಡೆಯ ಮೇಲಿಂದ ಕಾಲನ್ನು ಜಾರಿಸಿ ನಿಂತ; ಹೀಗೆ ಅವನು ನಿಂತ ಸ್ಥಳ ಗುರುಗಳ ತಲೆ ಆಗಿತ್ತು. ಕೂಡಲೇ ಅವನಿಗೆ ತಾನು ಏನು ಮಾಡುತ್ತಿರುವೆನೆಂದು ಅರಿವಾಗಿ ಭಯದಿಂದ ನಡುಗಿಹೋದ.

ಗುರುಗಳು ಹೇಳಿದರು: 'ಮಗು, ಚಳಿಯಲ್ಲಿ ತುಂಬ ಸುತ್ತಾಡಬೇಡಪ್ಪ; ಆರೋಗ್ಯ ಕೆಡುತ್ತದೆ, ಜೋಪಾನ'.

ಗುರುಗಳ ಈ ಮಾತನ್ನು ಕೇಳಿದ ಆ ಶಿಷ್ಯ ಮತ್ತೆ ಎಂದಿಗೂ ಗೋಡೆಯನ್ನು ಹಾರುವ ಕೆಲಸಕ್ಕೆ ಮುಂದಾಗಲಿಲ್ಲ.

★★★

ಇದೊಂದು ಮಾರ್ಮಿಕವಾದ ಸಂದರ್ಭ. ಇಂದಿಗೂ ನಮಗೆ ದಾರಿದೀಪವಾಗಬಲ್ಲದ್ದು; ಅದರಲ್ಲೂ ಮಕ್ಕಳನ್ನು ಹೇಗೆ ಬೆಳೆಸಬೇಕು, ಅವರ ತಪ್ಪುಗಳನ್ನು ಹೇಗೆ ತಿದ್ದಬೇಕು ಎನ್ನುವುದಕ್ಕೆ ಇದೊಂದು ದಿಕ್ಸೂಚಿಯಾಗುವಂಥದ್ದು. ನಮ್ಮ ಸರಿ–ತಪ್ಪುಗಳ ತೋಲನಕ್ಕೂ ಇದು ತಕ್ಕಡಿಯಾಗಬಲ್ಲದೆನ್ನಿ!

ಮನುಷ್ಯ ಎಂದರೆ ಯಾರು? ಈ ಪ್ರಶ್ನೆಗೆ ಉತ್ತರ ಕೊಡುವುದು ಸುಲಭವಲ್ಲ. ಪ್ರಾಯಶಃ ಸರಿ–ತಪ್ಪುಗಳ ಸುತ್ತಾಟವನ್ನು ಮಾಡುವ ಪ್ರಾಣಿಯೇ ಮನುಷ್ಯ – ಎನ್ನಲಾದೀತು. ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ, ಒಂದಲ್ಲ ಒಂದು ರೀತಿಯಲ್ಲಿ ಸರಿಯನ್ನೂ ಮಾಡಿರುತ್ತೇವೆ, ಹಾಗೆಯೇ ತಪ್ಪನ್ನೂ ಮಾಡಿರುತ್ತೇವೆ. ಸರಿ ಎಂದರೇನು? ತಪ್ಪು ಯಾವುದು? – ಹೇಳುವುದು ಕಷ್ಟ. ಏಕೆಂದರೆ ಸರಿ–ತಪ್ಪುಗಳು ಸಾಪೇಕ್ಷವಾದಂಥವು; ನಮಗೆ ಸರಿ ಎನಿಸಿದ್ದು ಮತ್ತೊಬ್ಬರಿಗೆ ತಪ್ಪು ಎನಿಸಬಹುದು; ನಮಗೆ ತಪ್ಪಾಗಿ ಕಂಡದ್ದು ಇನ್ನೊಬ್ಬರಿಗೆ ಸರಿಯಾಗಿ ಕಾಣಿಸಬಹುದು. ಅಷ್ಟೇಕೆ, ಇಂದು ನಾವು ಸರಿ ಎಂದು ಹಟ ಮಾಡಿದ್ದು ನಾಳೆಯ ಹೊತ್ತಿಗೆ ತಪ್ಪಾಗಿಯೂ ಪರಿಣಮಿಸಬಹುದು; ಇಂದಿನ ತಪ್ಪು ನಾಳೆಗೆ ಸರಿಯೂ ಆಗಬಹುದು. ಇಂಥ ಪಲ್ಲಟಗಳನ್ನು ನಮ್ಮ ಜೀವನದಲ್ಲೂ ಗಮನಿಸುತ್ತಿರುತ್ತೇವೆ; ಇತಿಹಾಸಚಕ್ರದಲ್ಲಿ ಇಂಥ ಏರು–ಪೇರುಗಳು ಸಾಕಷ್ಟು ನಡೆದಿರುವುದರ ನಿದರ್ಶನಗಳೂ ನಮ್ಮ ಮುಂದಿವೆ. ಹಾಗಾದರೆ ಸರಿ–ತಪ್ಪುಗಳ ನಿರ್ಣಯ ಹೇಗೆ? ಈ ಪ್ರಶ್ನೆಗೆ ಉತ್ತರಿಸುವುದು ಸುಲಭವಲ್ಲ. ಹೀಗಿದ್ದರೂ ನಾವು ನಮ್ಮ ಸರಿ–ತಪ್ಪುಗಳ ಕತ್ತಿಯನ್ನು ಎಲ್ಲರ ಮೇಲೂ ಝಳಪಿಸುತ್ತಲೇ ಇರುತ್ತೇವೆ. ನಮ್ಮ ಸರಿಗೆ ಸರಿ ಇರುವವರನ್ನು ಹೊಗಳುತ್ತೇವೆ; ನಮ್ಮ ತಪ್ಪಿಗೆ ತಲೆ ಕೊಡದವರನ್ನು ತೆಗಳುತ್ತೇವೆ. ಈ ಸರಿತಪ್ಪುಗಳ ತೂಗಾಟದಲ್ಲಿ ನಮ್ಮ ಮನಸ್ಸು ರಾಗ–ದ್ವೇಷಗಳಿಗೆ ವಶವಾಗುತ್ತದೆ. ರಾಗದ್ವೇಷಗಳೇ ನಮ್ಮನ್ನು ಸುಖ–ದುಃಖಗಳ ಬಂಧನದಲ್ಲಿ ಸಿಲುಕಿಸಿ ನರಳಿಸುವಂಥದ್ದು. ಸರಿ ಅಥವಾ ತಪ್ಪು ಏನೆಂದರೇನು ನಮಗೇ ಗೊತ್ತಿಲ್ಲದಿರುವಾಗ ಇನ್ನೊಬ್ಬರ ಸರಿ–ತಪ್ಪುಗಳನ್ನು ಹೇಗೆ ನಿರ್ಣಯಿಸಲಾದೀತು? ಇಂಥದೊಂದು ಎಚ್ಚರಿಕೆ ನಮಗೆ ಬರದಹೊರತು ನೆಮ್ಮದಿ ದೊರಕದು.

ಅಕ್ಕಮಹಾದೇವಿಯ ವಚನದ ಸಾಲೊಂದು ಸೊಗಸಾಗಿದೆ: 'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಂಗಳ ಚೇಷ್ಟೆಗೆ ಮನವೇ ಬೀಜ!' ಜಗತ್ತು ನಮಗೆ ಕಾಣುವುದು ಸೂರ್ಯನ